# ಸಮಗ್ರ ಶಿಕ್ಷಣ ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಪೂರಕ ಕಟ್ಟಡಗಳು ನೃಪತುಂಗ ರಸ್ತೆ, ಬೆಂಗಳೂರು – 01,
ದೂರವಾಣಿ ಸಂಖ್ಯೆ–08022483580, 22484720, ಫ್ಯಾಕ್ಸ್–080822104179, 22126718, ಇ–ಮೇಲ್– kpsssk2018@gmail.com

********************************************************************************************************

ಸಂಖ್ಯೆ:SSA/QMT/KPS/2018-19 ದಿನಾಂಕ: 15.02.2019

## ಸುತ್ತೋಲೆ

ವಿಷಯ: ಕರ್ನಾಟಕ ಪಬ್ಲಿಕ್ ಶಾಲೆಗಳ ಸಮಗ್ರ ಅಭಿವೃದ್ಧಿ ಯೋಜನೆಯ (Master plan) ಪ್ರಾತ್ಯಕ್ಷಿಕೆ ನೀಡುವ ಕುರಿತು

ಉಲ್ಲೇಖ:1. ಈ ಕಛೇರಿ ಸುತ್ತೋಲೆ ಸಂಖ್ಯೆ: SSA/QMT/KPS/2018-19, ದಿನಾಂಕ:18.12.2018.
2. ಈ ಕಛೇರಿ ಸುತ್ತೋಲೆ ಸಂಖ್ಯೆ: 11663/SSA/KPS/ಇತರೆ/2018-19, ದಿನಾಂಕ:17.01.2019

*************

ಮೇಲ್ಕಂಡ ಉಲ್ಲೇಖಿಗಳನ್ವಯ ಈಗಾಗಲೇ ಕರ್ನಾಟಕ ಪಬ್ಲಿಕ್ ಶಾಲೆಗಳ(ಕೆಪಿಎಸ್) ಸಮಗ್ರ ಅಭಿವೃದ್ಧಿ ಯೋಜನೆಯನ್ನು ತಯಾರಿಸಲು ತಿಳಿಸಲಾಗಿದೆ ಹಾಗೂ ಇದನ್ನು ಕೆ.ಪಿ.ಎಸ್ ವೆಬ್ ಪೋರ್ಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.

ಸಮಗ್ರ ಶಿಕ್ಷಣದಡಿ ಆಯ್ದ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ತಲಾ ರೂ.50.00 ಲಕ್ಷದವರೆಗೆ ಅನುದಾನ ನೀಡಲು ಅವಕಾಶವಿದೆ. ಈ ಅನುದಾನವನ್ನು ಮೂಲಭೂತ ಸೌಕರ್ಯ ಹಾಗೂ ಶೈಕ್ಷಣಿಕ ಅಭಿವೃದ್ಧಿ ಯೋಜನೆಯನ್ನು ತಯಾರಿಸಿರುವ ಕೆ.ಪಿ.ಎಸ್.ಗಳಿಗೆ ನೀಡುವ ಅವಕಾಶವಿದೆ. ಆದ್ದರಿಂದ ರಾಜ್ಯದ ಎಲ್ಲಾ ಕೆ.ಪಿ.ಎಸ್.ಗಳಿಗೆ ತಮ್ಮ ಸಮಗ್ರ ಯೋಜನೆಯನ್ನು ತಜ್ಞರ ತಂಡದ(Panel) ಮುಂದೆ **ದಿನಾಂಕ:25.02.2019** ರಿಂದ ಪಿಪಿಟಿ ಮೂಲಕ ಪ್ರಸ್ತುತಪಡಿಸಿ ವಿವರಿಸಲು ಆಹ್ವಾನ ನೀಡಲಾಗುತ್ತಿದೆ.

ಹೀಗೆ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಪ್ರಸ್ತುತಪಡಿಸಲು ಇಚ್ಛೆಯಿರುವ/ತಯಾರಾಗಿರುವ ಕೆ.ಪಿ.ಎಸ್.ಗಳು, ಲಗತ್ತಿಸಿರುವ ನಮೂನೆಯಲ್ಲಿ ವಿವರವನ್ನು ಭರ್ತಿ ಮಾಡಿ, ದಿನಾಂಕ:22.02.2019 ರೊಳಗೆ ಇ–ಮೇಲ್ ವಿಳಾಸ **kpsssk2018@gmail.com** ಮೂಲಕ ಸಲ್ಲಿಸಲು ತಿಳಿಸಿದೆ. ಪ್ರಾತ್ಯಕ್ಷಿಕೆಯು(PPT) ಗರಿಷ್ಠ 20 ಸ್ಲೈಡ್‌ಗಳನ್ನು ಒಳಗೊಂಡಿರಬೇಕು ಹಾಗೂ 30 ನಿಮಿಷದ ಅವಧಿಯೊಳಗಿರಬೇಕು. ಒಂದು ದಿನದಲ್ಲಿ 10 ಶಾಲೆಗಳಿಗೆ ಅವಕಾಶವನ್ನು ಕಲ್ಪಿಸಲಾಗುತ್ತದೆ. ಪ್ರಾತ್ಯಕ್ಷಿಕೆಯು ಶೈಕ್ಷಣಿಕ ಹಾಗೂ ಮೂಲಭೂತ ಸೌಕರ್ಯಗಳ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಒಳಗೊಂಡಿರಬೇಕು. ಪ್ರಾತ್ಯಕ್ಷಿಕೆಯು ಕೆಪಿಎಸ್ ಪೋರ್ಟ್‌ನಲ್ಲಿ ಅಳವಡಿಸಿದ ಸಮಗ್ರ ಯೋಜನೆಯ ರೀತಿಯಲ್ಲಿರಬಹುದು ಅಥವಾ ಶಾಲೆಯವರು ಪ್ರತ್ಯೇಕವಾಗಿ ತಯಾರಿಸಿದ ಸಮಗ್ರ ಯೋಜನೆಯು ಆಗಿರಬಹುದು, ಪ್ರಾತ್ಯಕ್ಷಿಕೆ ನಂತರ ತಜ್ಞರ ತಂಡದ ಜೊತೆ ಚರ್ಚೆಯಲ್ಲಿ ಪಾಲ್ಗೊಳ್ಳಬೇಕಾಗುತ್ತದೆ.

ಈಗಾಗಲೇ ಬಿಡುಗಡೆ ಮಾಡಿರುವ ಅನುದಾನದ ವೆಚ್ಚದ ವಿವರಗಳನ್ನು ಮತ್ತು ಮುಂದುವರೆದ ಅವಶ್ಯಕ ಚಟುವಟಿಕೆಗಳು/ಸಾಧನ ಸಾಮಗ್ರಿಗಳು/ಕಾರ್ಯತಂತ್ರಗಳು ಹಾಗೂ ಅವುಗಳಿಗೆ ಅವಶ್ಯವಿರುವ ಅನುದಾನದ ವಿವರಗಳನ್ನು ಪ್ರಸ್ತುತಿ ಪಡಿಸಬೇಕು.

ಪ್ರಾತ್ಯಕ್ಷಿಕೆ ನೀಡಲು ಪ್ರತಿ ಕೆ.ಪಿ.ಎಸ್.ನಿಂದ ಪ್ರಾಂಶುಪಾಲರು, ಉಪಪ್ರಾಂಶುಪಾಲರು, ಒಬ್ಬ ಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿಗಳ ಪ್ರತಿನಿಧಿಗಳಲ್ಲಿ ಒಬ್ಬರೊಂದಿಗೆ ಆಗಮಿಸಬೇಕು. ಈಗಾಗಲೇ ತಿಳಿಸಿದಂತೆ **ದಿನಾಂಕ:22.02.2019 ರೊಳಗೆ ಇ–ಮೇಲ್ ಮೂಲಕ ನೋಂದಣಿ ಮಾಡಿಕೊಳ್ಳಲು ತಿಳಿಸಿದೆ.** ನೋಂದಾಯಿಸಿಕೊಂಡ ಶಾಲೆಗಳಿಗೆ ಪ್ರಸ್ತುತಿಗಾಗಿ ದಿನಾಂಕವನ್ನು ರಾಜ್ಯ ಕಛೇರಿಯಿಂದ ತಿಳಿಸಲಾಗುವುದು.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ–ಕರ್ನಾಟಕ
ಬೆಂಗಳೂರು

P.T.O.

Scanned by CamScanner

ಪ್ರತಿಯನ್ನು,

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ ಬೆಂಗಳೂರು–01 ಇವರ ಅವಗಾಹನೆಗಾಗಿ ಸಲ್ಲಿಸಿದೆ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅವಗಾಹನೆಗೆ ಸಲ್ಲಿಸಿದೆ.
3. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು.
4. ಅಪರ ಆಯುಕ್ತರು, ಧಾರವಾಡ ಮತ್ತು ಗುಲ್ಬರ್ಗಾ ಆಯುಕ್ತಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ.
5. ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
6. ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರುಗಳಿಗೆ.

ಇವರಿಗೆ ಅಗತ್ಯ ಕ್ರಮಕ್ಕಾಗಿ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ.
2. ರಾಜ್ಯದ ಎಲ್ಲಾ ಡಯಟ್‌ಗಳ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು(ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ.
3. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ.
4. ರಾಜ್ಯದ ಎಲ್ಲಾ ಕೆಪಿಎಸ್ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ತುರ್ತು ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮುಖಾಂತರ)
6. ರಾಜ್ಯದ ಎಲ್ಲಾ ಕೆ.ಪಿ.ಎಸ್ ಶಾಲೆಗಳ ಪ್ರಾಂಶುಪಾಲರು ಹಾಗೂ ಉಪಪ್ರಾಂಶುಪಾಲರಿಗೆ (ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮುಖಾಂತರ)
7. ಕಛೇರಿ ಪ್ರತಿ.

Scanned by CamScanner

## ಕೆ.ಪಿ.ಎಸ್ ಮಾಸ್ಟರ್ ಪ್ಲಾನ್ ಪ್ರಾತ್ಯಕ್ಷಿಕೆಗಾಗಿ ನೋಂದಣಿ

ಗೆ,
ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು,
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು.

ಮಾನ್ಯರೆ,

ವಿಷಯ: ಸಮಗ್ರ ಯೋಜನೆಯ ಪ್ರಾತ್ಯಕ್ಷಿಕೆ ನೀಡಲು ನೋಂದಾಸಿಕೊಳ್ಳುವ ಕುರಿತು.
ಉಲ್ಲೇಖ: ಈ ಕಛೇರಿ ಪತ್ರ ಸಂಖ್ಯೆ: SSA/QMT/KPS/2018-19, ದಿನಾಂಕ: 15.02.2019

******

ಕೆ.ಪಿ.ಎಸ್ ಶಾಲೆಯ ಹೆಸರು----------- ತಾಲ್ಲೂಕು-----------, -----------ಜಿಲ್ಲೆ, ಆದ ನಾವು ಉಲ್ಲೇಖ ಪತ್ರದಲ್ಲಿ ತಿಳಿಸಿದಂತೆ ನಮ್ಮ ಶಾಲೆಯ ಸಮಗ್ರ ಅಭಿವೃದ್ಧಿ ಯೋಜನೆಯ ಪ್ರಾತ್ಯಕ್ಷಿಕೆ ನೀಡಲು ಇಚ್ಛಿಸಿದ್ದೇವೆ.

ವಂದನೆಗಳೊಂದಿಗೆ

| | |
|---|---|
| ಉಪಪ್ರಾಂಶುಪಾಲರು | ಪ್ರಾಂಶುಪಾಲರು |
| ---------ಕೆಪಿಎಸ್ | ---------ಕೆಪಿಎಸ್ |
| -----ತಾಲ್ಲೂಕು | -----ತಾಲ್ಲೂಕು |

Scanned by CamScanner